# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಕಾರವಾರ

ಸಿ.ಸಿ. ನಂಃ 32/2020 ಪಿ.ಡಬ್ಲ್ಯೂಃ 6

ಸಿಡಬ್ಲೂಃ 8

ಸಾಕ್ಷಿದಾರರ ಹೆಸರು : ಪುಂಡಲೀಕ

ತಂದೆಯ ಹೆಸರು : ಸುಬ್ಬು ಪವಾರ

ವಯಸ್ಸು : 34 ವರ್ಷ

ಉದ್ಯೋಗ : ಕೂಲಿ ಕೆಲಸ

ವಾಸ್ತವ್ಯ : ಬಸವನಬಾಗೇವಾಡಿ , ಬಿಜಾಪುರ

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 22-02-2024

## ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ

2020 ರಲ್ಲಿ ನಾನು ಕಾರವಾರಕ್ಕೆ ರಸ್ತೆ ಕೆಲಸದ ಸಲುವಾಗಿ ಬಂದಿದ್ದೆ. ನನ್ನೊಂದಿಗೆ ಚಾಸಾ.1, 6 ಮತ್ತು ಮೃತ ರವಿ ಸಹ ಬಂದಿದ್ದರು. ಅಪಘಾತವನ್ನು ನಾನು ಕಣ್ಣಾರೆ ನೋಡಿರುವುದಿಲ್ಲಾ. ಅಪಘಾತದ ಬಗ್ಗೆ ನನಗೆ ಮಾಹಿತಿ ಇಲ್ಲಾ. ನಾನು ನೇರವಾಗಿ ಆಸ್ಪತ್ರೆಗೆ ಹೋಗಿರುತ್ತೇನೆ. ನಾನು ಆಸ್ಪತ್ರೆಗೆ ಹೋದಾಗ ರವಿ ತೀರಿಕೊಂಡಿದ್ದನು. ಯಾರೋ ಬೈಕ ಹಾಯಿಸಿದ್ದರಿಂದ ರವಿ ಮೃತ ಪಟ್ಟಿರುತ್ತಾನೆಂದು ಆಸ್ಪತ್ರೆಯಲ್ಲಿ ಮಾತನಾಡಿಕೊಳ್ಳುತ್ತಿದ್ದರು. ಯಾರು ಅಪಘಾತಪಡಿಸಿದ್ದರೆಂದು ಹೇಳಿರುವುದಿಲ್ಲಾ. ಈ ಬಗ್ಗೆ ಪೋಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲಾ.

**(ಈ ಹಂತದಲ್ಲಿ ಎಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು , ಅನುಮತಿ ನೀಡಲಾಯಿತು)**

## ಪಾಟೀ ಸವಾಲುಃ ಎಪಿಪಿ ರವರಿಂದಃ

2. ದಿನಾಂಕಃ 03.02.2019 ರಂದು ಗಾಂವಗೇರಿಯಲ್ಲಿ ಹೆದ್ದಾರಿ ಪಕ್ಕ ಕಾರವಾರಕ್ಕೆ ಹೋಗಲು ಬಸ್ಸಗಾಗಿ ಕಾಯುತ್ತಾ ನಿಂತಿರುವಾಗ ನನ್ನ ಸಂಬಂಧಿ ರವಿ ಹಾಗೂ ಉಮೇಶ ಮತ್ತು ಶಂಕರ ಇವರು ಗಾಂವಗೇರಿ ಕಡೆಗೆ ನಡೆದುಕೊಂಡು ಬರುತ್ತಿದ್ದರೆಂದರೆ ಸರಿಯಲ್ಲ. ಅವರ ಹಿಂದಿನಿಂದ ಅಂದರೆ ಕಾರವಾರ ಕಡೆಯಿಂದ ಗೋವಾ ಕಡೆಗೆ ಒಬ್ಬ ಸ್ಕೂಟರ ಚಾಲಕನು ತನ್ನ ಸ್ಕೂಟರನ್ನು ಅತಿವೇಗವಾಗಿ

ಮತ್ತು ಅಜಾಗರೂಕತೆಯಿಂದ ತನ್ನ ಸ್ಕೂಟರನ್ನು ಚಲಾಯಿಸಿಕೊಂಡು ಬಂದು ತನ್ನ ಸ್ಕೂಟರನ್ನು ನಿಯಂತ್ರಿಸಲು ಸಾಧ್ಯವಾಗದೇ ನಡೆದುಕೊಂಡು ಬರುತ್ತಿದ್ದ ರವಿ ಲಮಾಣಿಗೆ ಹಿಂದಿನಿಂದ ಡಿಕ್ಕಿ ಹೊಡೆದು ಅಪಘಾತ ಪಡಿಸಿ ಸ್ಕೂಟರ ಸಮೇತ ರಸ್ತೆಯ ಮೇಲೆ ಬಿದ್ದರು  ಎಂದರೆ ಸರಿಯಲ್ಲ. ನಾನು ಕೂಡಲೇ ಓಡಿ ಹೋಗಿ ನೋಡಿದ್ದು , ರವಿ  ರಸ್ತೆಯ ಮೇಲೆ ಬಿದ್ದಿದ್ದು , ಅವನ ತಲೆಯ ಹಿಂಭಾಗದಿಂದ ರಕ್ತ ಬರುತ್ತಿತ್ತು , ಮೂಗು ಮತ್ತು ಕಿವಿಯಿಂದ ರಕ್ತ ಬರುತ್ತಿತ್ತು. ಅವನು ಮಾತನಾಡುವ ಪರಿಸ್ಥಿತಿಯಲ್ಲಿ ಇರದೇ ಗಂಭೀರವಾಗಿ ಗಾಯಗೊಂಡಿದ್ದನೆಂದರೆ ಸರಿಯಲ್ಲ. ಆಗ ಸಮಯ ಸಂಜೆ 6.30 ಗಂಟೆ ಆಗಿತ್ತೆಂದರೆ ಸರಿಯಲ್ಲ. ಅಪಪಘಾತ ಪಡಿಸಿದ ಸ್ಕೂಟರ ಸವಾರನೂ ಅಲ್ಲಿದ್ದು , ಅವರಿಗೆ ಗಾಯ ಆಗಿರಲಿಲ್ಲಾ ಎಂದರೆ ಸರಿಯಲ್ಲ.  ಅಪಘಾತಪಡಿಸಿದ ಸ್ಕೂಟರ ನಂ. ಜಿ ಎ 08 ವೈ 1243 ಇದ್ದು , ಅದರ ಸವಾರನ ಹೆಸರು ಹಿತೇಶ ಕೋಲ್ಕರ , ಸಾಃ ಕಾಣಕೋಣ, ಗೋವಾ ಎಂದು ನಮಗೆ ತಿಳಿಯಿತು ಎಂದರೆ ಸರಿಯಲ್ಲ.  ಆಗ ನಾವೆಲ್ಲರೂ ಸೇರಿ ರವಿಯನ್ನು ಕಾರವಾರದ ಜಿಲ್ಲಾ ಆಸ್ಪತ್ರೆಗೆ ಆಟೋ ರಿಕ್ಷಾ ಮೇಲಾಗಿ ಕರೆದುಕೊಂಡು ಹೋಗಿದ್ದು , ರವಿ ಮಾರ್ಗಮಧ್ಯದಲ್ಲಿ ಮೃತಪಟ್ಟಿರುವ ಬಗ್ಗೆ ನಮಗೆ ತಿಳಿಯಿತು ಎಂದರೆ ಸರಿಯಲ್ಲ. ಅಪಘಾತವಾದ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಈಗ ನನಗೆ ಓದಿ ಹೇಳಿದಂತೆ ನಾನು ಪೋಲೀಸರ ಮುಂದೆ "ದಿನಾಂಕಃ 03.02.2019 . . . . . . . . . ಮೃತಪಟ್ಟಿರುವ ಬಗ್ಗೆ ತಿಳಿಸಿದರು" ಎಂದು ನಿಪಿ.11 ರ ಪ್ರಕಾರ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಈ ಅಪಘಾತವನ್ನು ನಾನು ನೋಡಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಸಿ ಡಿ ಎನ್  ಆರೋಪಿ ಪರ ವಕೀಲರಿಂದಃ**

**– ಇಲ್ಲಾ – ಎಂದು ನುಡಿದಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು).

ಓ. ಹೇ.ಕೇ. ಸರಿ ಇದೆ.

**ಪ್ರ.ದ.ನ್ಯಾದಂ. ಕಾರವಾರ**